**<u>ದಿನಾಂಕ 27-02-2024 ರಂದು ಸಾಕ್ಷಿಯನ್ನು ಕರೆಯಿಸಿ ಮುಖ್ಯ ವಿಚಾರಣೆಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಶ್ರೀಮತಿ. ಕೆ. ಎಲ್. ಪಿ. ವಾದಿ ಪರ ವಕೀಲರಿಂದಃಃ</u>**

ನಾನು ವಾದಿ ಇದ್ದು , ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಯಿಸಿ ತಿಳಿದುಕೊಂಡಿರುತ್ತೇನೆ ಹಾಗೂ ಈ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣ ಮಾಡಿ ಸಹಿ ಮಾಡಿರುತ್ತೇನೆ.

ನಾನು ಈಗಾಗಲೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ಅವುಗಳನ್ನು ನಾನು ನೋಡಿ ಗುರುತಿಸಿದ್ದು, ನಂತರ ಈ ಕೆಳಕಂಡಂತೆ ದಾಖಲಾತಿಗಳನ್ನು ಗುರುತಿಸಲಾಯಿತು.

1. ಸಾಕ್ಷಿಯು 35 ಕೈ ಬರಹದ ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ 1 ರಿಂದ ನಿಪಿ- 35 ಎಂದು ಗುರುತಿಸಲಾಯಿತು.

2. ಸಾಕ್ಷಿಯು ಆರು ಗಣಕೀಕೃತ ಪಹಣಿ ಪತ್ರಿಕೆಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ-36 ರಿಂದ ನಿಪಿ-41 ಎಂದು ಗುರುತಿಸಲಾಯಿತು.

3. ಸಾಕ್ಷಿಯು ದಿಃ 29-05-1996 ರ ದೃಢೀಕೃತ ಕ್ರಯ ಪತ್ರದ ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-42 ಎಂದು ಗುರುತಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಸಮಯ ಕೋರಿದ್ದು ಸಮಯ ನೀಡಲಾಯಿತು.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.